ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

# ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ - 2019

(ಭಾಗವಹಿಸಲು ಅರ್ಜಿ ನಮೂನೆ)

ದಿನಾಂಕ 08.02.2019 ರಿಂದ 12.02.2019 ರವರೆಗೆ

ಸ್ಥಳ : ರವಿಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ.ರಸ್ತೆ, ಬೆಂಗಳೂರು

1. ಪ್ರಕಾಶನ ಸಂಸ್ಥೆಯ ಹೆಸರು

2. ಪ್ರಕಾಶನ ಸಂಸ್ಥೆಯ ಪೂರ್ಣ ವಿಳಾಸ ಹಾಗೂ ದೂರವಾಣಿ ಸಂಖ್ಯೆ

ಮಾಲೀಕ/ಪ್ರತಿನಿಧಿಗಳ ದೂರವಾಣಿ ಸಂಖ್ಯೆ

3. ಅಗತ್ಯವಿರುವ ಮಳಿಗೆ ಒಂದು ಎರಡು ಮೂರು

4. ಪ್ರದರ್ಶನ ಹಾಗೂ ಮಾರಾಟಕ್ಕೆ ಇಡಬಹುದಾದ ಶೀರ್ಷಿಕೆಗಳ ಸಂಖ್ಯೆ

5. ಠೇವಣಿ ಡಿ.ಡಿ. ಕಟ್ಟಲಾಗಿದೆಯೇ?

ಡಿ.ಡಿ. ಸಂಖ್ಯೆ & ದಿನಾಂಕ:

7. ಮಳಿಗೆ ಮುಂದೆ ಬರೆಸಬೇಕಾದ ಹೆಸರನ್ನು ಸ್ಪಷ್ಟವಾಗಿ ತಿಳಿಸಿ

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ನಡೆಯಲಿರುವ ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ 2019ರ ಯಶಸ್ಸು ಮತ್ತು ಪರಿಣಾಮಕಾರಿ ನಿರ್ವಹಣೆಗೆ ಗೊತ್ತುಪಡಿಸಿದ ಎಲ್ಲಾ ನಿಯಮಗಳನ್ನು ನಾವು ಒಪ್ಪಿಕೊಂಡಿದ್ದು, ಯಾವುದೇ ನಿಯಮಗಳನ್ನು ಉಲ್ಲಂಘನೆ ಮಾಡುವುದಿಲ್ಲವೆಂದು ಪ್ರಮಾಣೀಕರಿಸುತ್ತೇವೆ. ಸಂತೋಷದಿಂದ ಈ ಮೇಳದಲ್ಲಿ ಭಾಗವಹಿಸುತ್ತೇವೆ.

ದಿನಾಂಕ :

ಸ್ಥಳ :

ಪ್ರಕಾಶಕರ ಹೆಸರು / ಸಹಿ / ಮುದ್ರೆ

## ನಿಯಮಗಳು

1. **"ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ-2019"**ನ್ನು 08.02.2019 ರಿಂದ 12.02.2019ರವರೆಗೆ ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ.ರಸ್ತೆ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ.
2. **ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ – 2019**ರಲ್ಲಿ ಕನ್ನಡ ಪುಸ್ತಕಗಳು ಹಾಗೂ ಕನ್ನಡದಿಂದ ಇತರೆ ಭಾಷೆಗಳಿಗೆ ಭಾಷಾಂತರಗೊಂಡ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಮಾತ್ರ ಅವಕಾಶವಿರುತ್ತದೆ.
3. ಮಳಿಗೆಯ ವಿಸ್ತೀರ್ಣ 10 x 10 ಅಡಿ.
4. ಮಳಿಗೆ ಒಂದಕ್ಕೆ ಠೇವಣಿ 2000/- ಡಿ.ಡಿ.ಯನ್ನು ಆಡಳಿತಾಧಿಕಾರಿಗಳು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿನಲ್ಲಿ ಡಿ.ಡಿ.ಯನ್ನು ನೀಡುವುದು
5. ನಿಗದಿತ ಅರ್ಜಿಯ ಜೊತೆ ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಅವರ ಹೆಸರಿನಲ್ಲಿ ಡಿ.ಡಿ.ಯನ್ನು ಕಳುಹಿಸಿಕೊಡಬೇಕು. ಪ್ರದರ್ಶಕರು ಮೇಳದಲ್ಲಿ ಭಾಗವಹಿಸಲು ಒಪ್ಪಿ ನಂತರ ಭಾಗವಹಿಸದಿದ್ದರೆ ಅಥವಾ ಭಾಗವಹಿಸಿ ಅವಧಿಯ ಮಧ್ಯದಲ್ಲಿ ತಮ್ಮ ಮಳಿಗೆಯನ್ನು ಮುಚ್ಚಿದರೆ ಠೇವಣಿ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.
6. ಠೇವಣಿ ಹಣವನ್ನು ಮೇಳ ಮುಗಿದ ನಂತರ ಹಿಂದಿರುಗಿಸಲಾಗುವುದು.
7. ಒಂದಕ್ಕಿಂತ ಹೆಚ್ಚು ಮಳಿಗೆ ಬೇಕಾದರೆ ಮಳಿಗೆ ಒಂದಕ್ಕೆ ಠೇವಣಿ ರೂ. 1000-00 ಹೆಚ್ಚುವರಿಯಾಗಿ ಪಾವತಿಸಬೇಕು. ಹೆಚ್ಚುವರಿ ಮಳಿಗೆಯನ್ನು ಆದ್ಯತೆಯ ಮೇರೆಗೆ ನೀಡಲಾಗುವುದು.
8. ಪ್ರತಿ ಮಳಿಗೆ ಮುಂಭಾಗಕ್ಕೆ ಒಂದೇ ರೀತಿಯಲ್ಲಿ ಪ್ರಕಾಶನ ಸಂಸ್ಥೆಯ ಹೆಸರನ್ನು ಅರ್ಜಿಯಲ್ಲಿ ತಿಳಿಸಿದಂತೆ ಬರೆಸಿ ಸಜ್ಜುಗೊಳಿಸಲಾಗುವುದು. ಯಾವುದೇ ಕಾರಣಕ್ಕೂ ವೈಯಕ್ತಿಕ ಬ್ಯಾನರ್, ಫ್ಲೆಕ್ಸ್‌ಗಳನ್ನು ಪ್ರದರ್ಶಿಸಲು ಅವಕಾಶವಿರುವುದಿಲ್ಲ.
9. ಮೇಳದಲ್ಲಿ ಪ್ರದರ್ಶಕರು / ಮಾರಾಟಗಾರರು ಶೇಕಡ 10% ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲೇಬೇಕು.
10. ಮೇಳದ ಪ್ರಚಾರಕ್ಕೆ ಸಂಬಂಧಿಸಿದಂತೆ ಪತ್ರಿಕಾ ಪ್ರಕಟಣೆಯ ಪ್ರತಿ ಹಾಗೂ ಈ ಕುರಿತು ಆಸಕ್ತರಿಗೆ ಎಸ್.ಎಂ.ಎಸ್ / ಮೆಸೇಜ್ (ಮೊಬೈಲ್) ಮಾಡಿದ ಬಗ್ಗೆ ತೋರಿಸುವ ದಾಖಲೆಗೆ ಪ್ರತಿಯಾಗಿ ಪ್ರಾಧಿಕಾರದಿಂದ ಶೇ 5% ರಿಯಾಯಿತಿಯ ಕೂಪನ್ ಒಂದನ್ನು ವಿತರಿಸಲಾಗುವುದು. ಕೂಪನ್ ಪಡೆದ ಪ್ರತಿ ಒಬ್ಬರಿಗೂ ತಾವು ನೀಡುವ ರಿಯಾಯಿತಿ ದರದಲ್ಲಿ ಶೇ 5% ಹೆಚ್ಚುವರಿ ರಿಯಾಯಿತಿಯನ್ನು ಪ್ರತಿ ಪುಸ್ತಕಕ್ಕೆ ನೀಡುವುದು ಕಡ್ಡಾಯ.
11. ಪುಸ್ತಕಗಳ ಮಾರಾಟಕ್ಕೆ ತಪ್ಪದೆ ಬಿಲ್ಲನ್ನು ಹಾಕಬೇಕು.
12. ತಮ್ಮ ಮಳಿಗೆಯಿಂದ ಎಷ್ಟು ಪುಸ್ತಕಗಳು ಮಾರಾಟವಾದವು? ಎಷ್ಟು ಮೊಬಲಗು ಆಯಿತು? ಎಂದು ಪ್ರತಿ ಮಳಿಗೆಯವರು ದಿನದ ಕೊನೆಗೆ ಪ್ರಾಧಿಕಾರ ಕಚೇರಿಗೆ ವರದಿ ನೀಡುವುದು.
13. ಪ್ರದರ್ಶನ ಹಾಗೂ ಮಾರಾಟದ ಸಮಯ ಬೆಳಿಗ್ಗೆ 10.00 ರಿಂದ ರಾತ್ರಿ 8.30 ಗಂಟೆಯವರೆಗೆ ಇರುತ್ತದೆ.
14. ಪ್ರದರ್ಶಕರು ತಮ್ಮ ಮಳಿಗೆಯನ್ನು ತೆರೆಯಲು ಅರ್ಧ ಗಂಟೆ ಮುಂಚಿತವಾಗಿ ಬರಬೇಕು. ಸಕಾಲಕ್ಕೆ ಬಾರದಿದ್ದರೆ ಮಳಿಗೆಯ ಜವಾಬ್ದಾರಿ ವ್ಯವಸ್ಥಾಪಕರದಲ್ಲ ಹಾಗೂ ರಾತ್ರಿ ವೇಳೆಗೆ 8.30ಕ್ಕೆ ಮಳಿಗೆ ಮುಚ್ಚಿ ಹೊರಹೋಗಬೇಕು.
15. ಸಾರ್ವಜನಿಕರಿಗೆ ಪ್ರವೇಶ ಉಚಿತ.
16. ದಿನಾಂಕ 07.02.2019 ರಂದು ಸಂಜೆ 5.00 ಗಂಟೆಗೆ ಡ್ರಾ ಮಾಡುವ ಮೂಲಕ ಮಳಿಗೆಗಳನ್ನು ವಿತರಿಸಲಾಗುವುದು. ಡ್ರಾ ಸಂದರ್ಭದಲ್ಲಿ ಪ್ರದರ್ಶಕರು/ ಪ್ರಕಾಶಕರು ಹಾಜರಿರಬಹುದು.
17. ಪುಸ್ತಕ ಮೇಳದ ಪ್ರಾರಂಭದ ಹಿಂದಿನ ದಿನವೇ ಪ್ರದರ್ಶಕರು ತಮ್ಮ ಮಳಿಗೆಗಳನ್ನು ವಶಕ್ಕೆ ತೆಗೆದುಕೊಂಡು ಸಜ್ಜುಗೊಳಿಸಬೇಕು.
18. ದಿನಾಂಕ:07.02.2019ರಂದು ಸಂಜೆ 8.00 ಗಂಟೆಯ ಒಳಗೆ ತಮಗೆ ಹಂಚಿಕೆ ಮಾಡಲಾದ ಮಳಿಗೆಯಲ್ಲಿ ವ್ಯವಸ್ಥಿತವಾಗಿ ಪುಸ್ತಕಗಳನ್ನು ಜೋಡಿಸಿ ಕಡ್ಡಾಯವಾಗಿ ಸಜ್ಜುಗೊಳಿಸಿಕೊಂಡಿರಬೇಕು.
19. ಪುಸ್ತಕ ಮಾರಾಟ ಮೇಳದ ಅವಧಿಯಲ್ಲಿ ಮಳಿಗೆಯ ಪ್ರಕಾಶಕರು /ಮಾರಾಟಗಾರರಿಗೆ ಊಟ, ವಸತಿ ಒದಗಿಸುವ ಯಾವುದೇ ವ್ಯವಸ್ಥೆ ಇರುವುದಿಲ್ಲ. ಅವರವರೇ ಸದರಿ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.
20. ಅರ್ಜಿ ಸಲ್ಲಿಸಲು ಕಡೆಯ ದಿನಾಂಕ 31.01.2019 ಸಂಜೆ 5.00 ಗಂಟೆಯವರೆಗೆ
21. ನಿಷೇಧಿತ ಹಾಗೂ ಆಕ್ಷೇಪಾರ್ಹ ಪುಸ್ತಕಗಳನ್ನು ಮಾರಾಟ ಮಾಡಬಾರದು.
22. ಯಾವುದೇ ರೀತಿಯ ಧ್ವನಿವರ್ಧಕಗಳನ್ನು ಮಳಿಗೆಯಲ್ಲಿ ಹಾಕಬಾರದು.
23. ಹೆಚ್ಚುವರಿ ಟೇಬಲ್ ಬೇಕಾದವರು ಹಣ ಪಾವತಿಸಿ ಪಡೆಯಬಹುದು.
24. ಮಳಿಗೆಗಳಲ್ಲಿ ಪುಸ್ತಕಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳನ್ನು ಮಾರಾಟ ಮಾಡಬಾರದು. (ಉದಾಹರಣೆ : ಸಿ.ಡಿ., ಕ್ಯಾಸೆಟ್, ಇತ್ಯಾದಿಗಳು) ವಿಶ್ವಕೋಶ ಇತ್ಯಾದಿ ಸಂಪುಟಗಳ ಡಿ.ವಿ.ಡಿ.ಗಳಿಗೆ ಈ ನಿಯಮ ಅನ್ವಯವಾಗುವುದಿಲ್ಲ.
25. ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಕನ್ನಡ ಪುಸ್ತಕ ಪ್ರಾಧಿಕಾರದ ಇ-ಮೇಲ್: kannadappradhikara@gmail.com ಮೂಲಕ ಕಳಿಸುವುದರೊಂದಿಗೆ ಮೂಲ ಅರ್ಜಿಯನ್ನು ಪ್ರಾಧಿಕಾರಕ್ಕೆ ನೊಂದಾಯತ ಅಂಚೆ ಅಥವಾ ಮುದ್ದಾಂ ಮೂಲಕ ಸಲ್ಲಿಸುವುದು.
26. ನಿರ್ಮಿಸಲಾಗುವ 60 ಮಳಿಗೆಗಳನ್ನು ಆದ್ಯತೆಯ ಮೇರೆಗೆ ವಿತರಿಸಲಾಗುವುದು.
27. ಎಲ್ಲಾ ವಿಷಯಗಳಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ತೀರ್ಮಾನವೇ ಅಂತಿಮ.

ಸಹಿ/-

ಆಡಳಿತಾಧಿಕಾರಿ (ಪ್ರ)

ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು